ಬೆವಿಕಂ
BESCOM
# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ.)

ಕ್ರ.ಸಂ:ಬೆ.ವಿ.ಕA/ಪ್ರವ್ಯ(ಆ ಮತ್ತು ಮಾ.ಸಂ)/ಉಪ್ರವ್ಯ/ಮಾಸಂಅ/ಬಿಸಿ-40/2024-2025/

CYS - 3

ಕಂಪನಿ ಕಾರ್ಯಾಲಯ,
ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ,
ಟ್ರೀ ಪಾರ್ಕ್ ಎದುರು, ಅರ್ಚಕರಹಳ್ಳಿ,
ಮೈಸೂರು-ಬೆಂಗಳೂರು ರಸ್ತೆ,
ರಾಮನಗರ-562159.
☏: 080-29916273
✉: dgmhrd.work@gmail.com
ದಿನಾಂಕ: 22 APR 2024

ಇವರಿಗೆ :
ಅಧೀಕ್ಷಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನಾ ವೃತ್ತ,
ಬೆ.ವಿ.ಕಂ. ಬೆಂಗಳೂರು ದಕ್ಷಿಣ ವೃತ್ತ/
ಕೋಲಾರ ವೃತ್ತ/ತುಮಕೂರು ವೃತ್ತ/ದಾವಣಗೆರೆ ವೃತ್ತ.

ಮಾನ್ಯರೇ,

**ವಿಷಯ :** **MTTP-3** ರ ಅನ್ವಯ **84ನೇ** ತಂಡದಲ್ಲಿ ಮಾರ್ಗದಾಳು/ಸ್ಟೇಷನ್ ಅಟೆಂಡೆಂಟ್/ಇತರೆ ಹುದ್ದೆಯಿಂದ ಮಾಪಕ ಓದುಗ/ಮೇಲ್ವಿಚಾರಕ/ಅಪರೇಟರ್/ಸಹಾಯಕ ಉಗ್ರಾಣ ಪಾಲಕ ಹುದ್ದೆಗಾಗಿ ಬಡ್ತಿಪೂರ್ವ ತರಬೇತಿಯನ್ನು ಆಯೋಜಿಸುವ ಬಗ್ಗೆ.

**ಉಲ್ಲೇಖ:**
1. ಕ.ವಿ.ಪ್ರ.ನಿ.ನಿ. ಕಾರ್ಪೋರೇಟ್ ಕಚೇರಿ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ.74/5901/2007-08 ದಿನಾಂಕ 26.11.2007.
2. ಅಧೀಕ್ಷಕ ಇಂಜಿನಿಯರ್(ವಿ), ಕೋಲಾರ ವೃತ್ತ, ಬೆವಿಕಂ ರವರ ಕಛೇರಿಯ ಇ-ಮೇಲ್ ದಿನಾಂಕ: 09.08.2023.
3. ಅಧೀಕ್ಷಕ ಇಂಜಿನಿಯರ್(ವಿ), ದಾವಣಗೆರೆ ವೃತ್ತ, ಬೆವಿಕಂ ರವರ ಕಛೇರಿಯ ಇ-ಮೇಲ್ ದಿನಾಂಕ: 09.08.2023.
4. ಅಧೀಕ್ಷಕ ಇಂಜಿನಿಯರ್(ವಿ), ಬೆಂಗಳೂರು ದಕ್ಷಿಣ ವೃತ್ತ, ಬೆವಿಕಂ ರವರ ಕಛೇರಿಯ ಇ-ಮೇಲ್ ದಿನಾಂಕ: 09.08.2023.
5. ಅಧೀಕ್ಷಕ ಇಂಜಿನಿಯರ್(ವಿ), ತುಮಕೂರು ವೃತ್ತ, ಬೆವಿಕಂ ರವರ ಕಛೇರಿಯ ಪತ್ರ ಸಂಖ್ಯೆ: ಅಇಂ(ವಿ)/ಉಲೆನಿ/ಲೆಅ/ಸಲೆಅ/ಹಿಸ/21-22/2948-50 ದಿನಾಂಕ:10.02.2022.

************

ದಿನಾಂಕ **13.05.2024** ರಿಂದ **19.06.2024** ರವರೆಗೆ ಬೆ.ವಿ.ಕಂ. ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ರಾಮನಗರ. ಇಲ್ಲಿ 84ನೇ ತಂಡದ ಮಾರ್ಗದಾಳು/ಸ್ಟೇಷನ್ ಅಟೆಂಡೆಂಟ್/ಇತರೆ ಇವರಿಗೆ **30 ಕೆಲಸದ ದಿನಗಳ ವಸತಿ ಸಹಿತ ಬಡ್ತಿ ಪೂರ್ವ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ.**

ಮೇಲ್ಕಂಡ ತರಬೇತಿಗೆ ನಿಮ್ಮ ವೃತ್ತದಿಂದ ನಿಯೋಜಿಸಬೇಕಾದ ಅರ್ಹ ಮಾರ್ಗದಾಳು/ಸ್ಟೇಷನ್ ಅಟೆಂಡೆಂಟ್/ಇತರೆ ಸಂಖ್ಯೆಯನ್ನು ಕೆಳಕಂಡಂತೆ ನಿಗದಿಪಡಿಸಲಾಗಿದೆ.

| ಕ್ರಮ ಸಂಖ್ಯೆ | ವೃತ್ತ | ನಿಯೋಜಿಸಬೇಕಾದ ಮಾರ್ಗದಾಳು/ಸ್ಟೇಷನ್ ಅಟೆಂಡೆಂಟ್/ಇತರೆ ಸಂಖ್ಯೆ | ಷರಾ |
|---|---|---|---|
| 1 | ಬೆಂಗಳೂರು ದಕ್ಷಿಣ/ಉತ್ತರ/ ಪೂರ್ವ/ ಪಶ್ಚಿಮ/ ಗ್ರಾಮಾಂತರ/ರಾಮನಗರ ವೃತ್ತಗಳು | 15 | – |
| 2 | ತುಮಕೂರು ವೃತ್ತ | 15 | – |
| 3 | ಕೋಲಾರ ವೃತ್ತ | 10 | – |

| | | | |
|---|---|---|---|
| 4 | ದಾವಣಗೆರೆ ವೃತ್ತ | 10 | – |
| | **ಒಟ್ಟು** | **50** | |

ತರಬೇತಿಗೆ ನಿಯೋಜಿಸಲ್ಪಟ್ಟ ನೌಕರರು ದಿನಾಂಕ **13.05.2024 ರಂದು ಪೂರ್ವಾಹ್ನ 09:00 ಗಂಟೆಗೆ ಸರಿಯಾಗಿ** ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಟ್ರೀ ಪಾರ್ಕ್ ಎದುರು, ಬಿ.ಜಿ.ಎಸ್. ವರ್ಲ್ಡ್ ಸ್ಕೂಲ್ ಹತ್ತಿರ, ಅರ್ಚಕರಹಳ್ಳಿ, ರಾಮನಗರ. ಇಲ್ಲಿಗೆ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ. **ತರಬೇತಿಯು ವಸತಿ ಸಹಿತವಾಗಿರುತ್ತದೆ.** ತರಬೇತಿಗೆ ನಿಯೋಜಿಸಿದ ನೌಕರರು ನಿಗಮದ ನಿಯಮಾನುಸಾರ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗೆ ಅರ್ಹರಾಗಿರುತ್ತಾರೆ.

ತಮ್ಮ ವೃತ್ತದಿಂದ ತರಬೇತಿಗೆ ನಿಯೋಜಿಸಲ್ಪಟ್ಟ ಶಿಬಿರಾರ್ಥಿಗಳ ಜ್ಞಾಪನ ಪತ್ರದ ಪ್ರತಿಯನ್ನು ಈ ಕಚೇರಿಗೆ ತುರ್ತಾಗಿ ಕಳುಹಿಸಲು ಕೋರಲಾಗಿದೆ.

**ತರಬೇತಿಗೆ ಆಗಮಿಸುವ ಶಿಕ್ಷಣಾರ್ಥಿಗಳಿಗೆ ಸೂಚನೆಗಳು:**

1. ಈ ತರಬೇತಿಯು ವಸತಿ ಸಹಿತ ವಾಗಿರುತ್ತದೆ.
2. ಆರ್ & ಪಿ ರೆಗ್ಯೂಲೇಷನ್ ಅನ್ವಯ ವೃತ್ತವಾರು ಜ್ಯೇಷ್ಠತೆ ಆಧಾರದ ಮೇಲೆ ನೌಕರರನ್ನು ತರಬೇತಿಗೆ ನಿಯೋಜಿಸುವುದು. ನೌಕರರ ಜ್ಯೇಷ್ಠತೆಯನ್ನು ನಿರ್ಧರಿಸುವಲ್ಲಿ ಈ ಕಚೇರಿಯ ಪಾತ್ರ ಮತ್ತು ಜವಾಬ್ದಾರಿ ಇರುವುದಿಲ್ಲ.
3. ನಿಮ್ಮ ವೃತ್ತದಿಂದ ನಿಯೋಜಿಸಬೇಕಾದ ಅಭ್ಯರ್ಥಿಗಳ ಸಂಖ್ಯೆಯು ಮೇಲೆ ನಿಗದಿ ಪಡಿಸಿದ ಸಂಖ್ಯೆಯನ್ನು ಮೀರಬಾರದು.
4. ದಿನಾಂಕ **13.05.2024** ರ ನಂತರ ವರದಿಮಾಡಿಕೊಳ್ಳುವ ಶಿಕ್ಷಣಾರ್ಥಿಗಳನ್ನು ತರಬೇತಿಗೆ ಸೇರಿಸಿಕೊಳ್ಳಲಾಗುವುದಿಲ್ಲ.
5. ಸಂಬಂಧಿಸಿದ ಅಧಿಕಾರಿಗಳು ತರಬೇತಿಗೆ ನಿಯೋಜಿಸಲ್ಪಟ್ಟ ನೌಕರರನ್ನು ತರಬೇತಿಗೆ ಹಾಜರಾಗಲು ಅನುಕೂಲವಾಗುವಂತೆ ಸಕಾಲದಲ್ಲಿ ಕಾರ್ಯಮುಕ್ತ (ರಿಲೀವ್) ಮಾಡುವುದು.
6. ನಿಯೋಜಿತ ಶಿಕ್ಷಣಾರ್ಥಿಗಳು ಎರಡು ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರಗಳಲ್ಲಿ ಒಂದನ್ನು ಕಾರ್ಯಮುಕ್ತ ಪತ್ರದ (ರಿಲೀವ್ ರಿಪೋರ್ಟ್) ಬಲಭಾಗದಲ್ಲಿ ಅಂಟಿಸಿ ಕಚೇರಿ ಮುಖ್ಯಸ್ಥರ ಸಹಿ ಮತ್ತು ಮೊಹರುಗಳೊಂದಿಗೆ ತರಬೇತಿಗೆ ಹಾಜರಾಗುವ ಸಮಯದಲ್ಲಿ ಸಲ್ಲಿಸುವುದು ಹಾಗೂ 01 ಸ್ಟ್ಯಾಂಪ್ ಅಳತೆಯ ಭಾವ ಚಿತ್ರವನ್ನು ತರಬೇತಿಗೆ ಹಾಜರಾಗುವ ಸಮಯದಲ್ಲಿ ಸಲ್ಲಿಸುವುದು.
7. ಮಾ.ಸಂ.ಅ. ಕೇಂದ್ರದ ಹಾಸ್ಟೆಲ್‌ನಲ್ಲಿ ವಸತಿ, ಬೆಳಗಿನ ಫಲಹಾರ ಮತ್ತು ಚಹಾ / ಕಾಫಿ, ಊಟ, ಸೌಲಭ್ಯಗಳು ತರಬೇತಿ ಪೂರ್ಣಾವಧಿವರೆಗೂ ಇರುತ್ತವೆ. ಶಿಕ್ಷಣಾರ್ಥಿಗಳು ಅವರ ವಾಸ್ತವ್ಯದ ಅವಧಿಯಲ್ಲಿ ಬಳಸಲಾಗುವ ದಿನನಿತ್ಯದ ಸಾಮಗ್ರಿಗಳನ್ನು ತರತಕ್ಕದ್ದು (Toiletries).
8. ತರಬೇತಿಗೆ ನಿಯೋಜಿಸಲ್ಪಟ್ಟ ಶಿಕ್ಷಣಾರ್ಥಿಗಳು ಮಾ.ಸಂ.ಅ. ಕೇಂದ್ರದಲ್ಲಿಯೇ ಒದಗಿಸುವ ಹಾಸ್ಟೆಲ್ ನಲ್ಲಿ ತರಭೇತಿ ಅಂತ್ಯದವರೆಗೂ ಇರುವುದು ಖಡ್ಡಾಯವಾಗಿರುತ್ತದೆ. (ರಜಾ ದಿನಗಳು ಸೇರಿದಂತೆ).
9. ಶಿಕ್ಷಣಾರ್ಥಿಗಳ ಕುಟುಂಬ ಸದಸ್ಯರು, ಮಕ್ಕಳು, ಅತಿಥಿಗಳು ಮತ್ತು ಇತರೆ ಯಾರಿಗೂ ತರಬೇತಿ ಕೇಂದ್ರದಲ್ಲಿ ತಂಗಲು ಅಥವಾ ಕೇಂದ್ರದ ಒಳಗಡೆ ಪ್ರವೇಶಿಸಲು ಅವಕಾಶ ಇರುವುದಿಲ್ಲ.
10. ಶಿಕ್ಷಣಾರ್ಥಿಗಳು ತರಬೇತಿಯ ದಿನಗಳಲ್ಲಿ (ಭಾನುವಾರವೂ ಸೇರಿದಂತೆ) ಕೇಂದ್ರದಿಂದ ಹೊರಗಡೆ ಹೋಗುವುದನ್ನು ಕಡ್ಡಾಯವಾಗಿ ನಿರ್ಬಂಧಿಸಿದೆ ಹಾಗೂ ಅಭ್ಯರ್ಥಿಗಳು ತರಬೇತಿಗೆ ವರದಿ ಮಾಡಿಕೊಂಡ ನಂತರ ಅಂತಿಮ ಪರೀಕ್ಷೆ ಮುಗಿಯುವ ವರೆಗೂ ಹಾಗೂ ತರಬೇತಿಯಿಂದ ಬಿಡುಗಡೆ ಮಾಡುವ ವರೆಗೂ ಯಾವದೇ ಕಾರಣಕ್ಕೂ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ಆವರಣದಿಂದ ತೆರಳಲು ಅವಕಾಶವಿರುವುದಿಲ್ಲ.
11. ಔಷದೋಪಚಾರ (Under Medication) ದಲ್ಲಿರುವ ಶಿಕ್ಷಣಾರ್ಥಿಗಳು ಅವಶ್ಯಕ ಔಷಧಿಗಳನ್ನು ತಪ್ಪದೇ ತರುವುದು.
12. ತಂಬಾಕು, ಮಧ್ಯಪಾನ ಮತ್ತು ಧೂಮಪಾನ ಸೇವನೆಗಳನ್ನು ತರಬೇತಿ ಕೇಂದ್ರದಲ್ಲಿ ಮತ್ತು ಅತಿಥಿಗಳ ಗೃಹದಲ್ಲಿ ನಿಷೇಧಿಸಿದೆ.
13. ಶಿಕ್ಷಣಾರ್ಥಿಗಳು ತರಬೇತಿ ಪ್ರಾರಂಭವಾಗುವ ಮುನ್ನವೇ ಕೋವಿಡ್ ಎರಡು ಡೋಸ್ ಲಸಿಕೆ ಪಡೆದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಮಾ.ಸಂ.ಅ ಕೇಂದ್ರಕ್ಕೆ ತರತಕ್ಕದ್ದು.
14. ತರಬೇತಿಯ ಅವಧಿಯಲ್ಲಿ ಯಾವುದೇ ತರಹದ ರಜೆಗಳನ್ನು ನೀಡಲಾಗುವುದಿಲ್ಲ.
15. ಶಿಕ್ಷಣಾರ್ಥಿಗಳು ಅಗತ್ಯವಾದ ಮುಖಗವಸು(ಮಾಸ್ಕ್), ಸ್ಯಾನಿಟೈಸರ್ ಮತ್ತು ವೈಯಕ್ತಿಕವಾಗಿ ಬೇಕಾಗುವ ಎಲ್ಲಾ ಸಾಮಾಗ್ರಿಗಳನ್ನು ಕಡ್ಡಾಯವಾಗಿ ತರತಕ್ಕದ್ದು.

16. ಶಿಕ್ಷಣಾರ್ಥಿಗಳು ತರಗತಿ ಸಮಯದಲ್ಲಿ ಸಾಂಪ್ರದಾಯಕ ಉಡುಗೆ (Formal Dress) ಯನ್ನು ಕಡ್ಡಾಯವಾಗಿ ಧರಿಸುವುದು.

16. ಶಿಕ್ಷಣಾರ್ಥಿಗಳು ತರಗತಿಯಲ್ಲಿ ಮೊಬೈಲ್ ಬಳಸುವಂತಿಲ್ಲ.

17. ಶಿಕ್ಷಣಾರ್ಥಿಗಳಿಗೆ ತರಬೇತಿ ಅವಧಿಯಲ್ಲಿ ಯಾವುದೇ ತರಹದ ಕೋವಿಡ್-19ರ ಲಕ್ಷಣಗಳಾದ ಶೀತ, ಕೆಮ್ಮು, ಜ್ವರ ಇತ್ಯಾದಿ ಕಂಡು ಬಂದಲ್ಲಿ ತಕ್ಷಣವೇ ತರಬೇತಿಯಿಂದ ಬಿಡುಗಡೆ ಮಾಡಲಾಗುವುದು.
18. ತರಬೇತಿ ಸಮಯದಲ್ಲಿ ಹಾಗೂ ಊಟದ ಸಮಯದಲ್ಲಿ ಶಿಕ್ಷಣಾರ್ಥಿಗಳು ಗುಂಪಾಗಿ ಸೇರುವುದು, ಚರ್ಚೆ ಮಾಡುವುದನ್ನು ನಿಷೇಧಿಸಲಾಗಿದೆ.
19. ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸುವ ಕೋವಿಡ್-19 ಮಾರ್ಗಸೂಚಿಗಳನ್ನು ತಪ್ಪದೇ ಅನುಸರಿಸುವುದು.
20. ಮೇಲೆ ತಿಳಿಸಿರುವ ಎಲ್ಲಾ ಮಾರ್ಗಸೂಚಿಗಳನ್ನು ಪಾಲಿಸದ ಶಿಕ್ಷಣಾರ್ಥಿಗಳನ್ನು ಕೂಡಲೇ ತರಬೇತಿಯಿಂದ ಬಿಡುಗಡೆಗೊಳಿಸಲಾಗುವುದು.
21. ಶಿಕ್ಷಣಾರ್ಥಿಗಳು ತರಬೇತಿ ಅವಧಿಯಲ್ಲಿ ಶಿಸ್ತನ್ನು ಪಾಲಿಸುವುದು.

ತಮ್ಮ ವಿಶ್ವಾಸಿ,

(ಸಿ.ಎನ್. ಮಂಜುನಾಥ, ಕ.ಆ.ಸೇ.)
**ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.),**
**ಕಂಪನಿ ಕಾರ್ಯಾಲಯ, ಬೆ.ವಿ.ಕಂ.,**
**ಬೆಂಗಳೂರು.**

**ಪ್ರತಿಗಳು:**

1. ಅಧೀಕ್ಷಕ ಇಂಜಿನಿಯರ್ (ವಿ), ಕಾ. ಮತ್ತು ಪಾ. ವೃತ್ತಗಳು, ಬೆ.ವಿ.ಕಂ, ಬೆಂ. ಉತ್ತರ /ಬೆಂ. ಪೂರ್ವ /ಬೆಂ. ಪಶ್ಚಿಮ /ಬೆಂ. ಗ್ರಾಮೀಣ /ರಾಮನಗರ ಬೆ.ವಿ.ಕಂ.,

2. ಉಪ ಪ್ರಧಾನ ವ್ಯವಸ್ಥಾಪಕರು (ವಿ), ಮಾ.ಸಂ.ಅ ಕೇಂದ್ರ, ಬೆ.ವಿ.ಕಂ, ಟ್ರೀ ಪಾರ್ಕ್ ಎದುರು, ಬಿ.ಜಿ.ಎಸ್. ವರ್ಲ್ಡ್ ಸ್ಕೂಲ್ ಹತ್ತಿರ, ರಾಮನಗರ.
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾ. ಮತ್ತು ಪಾ. ವಿಭಾಗ, ಬೆ.ವಿ.ಕಂ ಇವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
4. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾ. ಮತ್ತು ಪಾ. ಉಪವಿಭಾಗ, ಬೆ.ವಿ.ಕಂ ಇವರ ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಿ&ಸೇ)/(ಆಂ.ಪ), ಕಂಪನಿ ಕಾರ್ಯಾಲಯ, ಬೆವಿಕಂ. ಬೆಂಗಳೂರು.
6. ಶ್ರೀ. ರಾಮಚಂದ್ರ ನಾಯಕ್ ಎಲ್. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಮಾ.ಸಂ.ಅ. ಕೇಂದ್ರ, ಬೆವಿಕಂ., (ಮೊಬೈಲ್ ಸಂಖ್ಯೆ: 9449844808) ರವರು ಈ ತಂಡದ ಸಮನ್ವಯ ಅಧಿಕಾರಿಯಾಗಿರುತ್ತಾರೆ
6. ಕಚೇರಿ ಪ್ರತಿ/ಮು.ಕ